# ‘ಪುಟಾಣಿ ದೇವರು’ ಬೀದಿಯಲ್ಲಿ!

ಮಕ್ಕಳು ಬೀದಿಪಾಲಾಗುವ ಸಾಮಾಜಿಕ ವೈಪರೀತ್ಯ ಆಧುನಿಕ ಜಗತ್ತು ಎದುರಿಸುತ್ತಿರುವ ಬಹುದೊಡ್ಡ ಸಮಸ್ಯೆಗಳಲ್ಲೊಂದು. ಯುದ್ಧಗಳು, ಆಂತರಿಕ ಸಂಘರ್ಷಗಳು, ಬಡತನ, ವಲಸೆ, ಅಂಗವೈಕಲ್ಯ, ಏಡ್ಸ್– ಇವೆಲ್ಲವೂ ಮಕ್ಕಳ ತಬ್ಬಲಿತನಕ್ಕೆ ಕಾರಣವಾಗಿವೆ.

ಓಣಿ ಕೇರಿಗಳು, ಕಿಕ್ಕಿರಿದ ಗಲ್ಲಿಗಳು, ಕಿರಿದು ರಸ್ತೆಗಳಿಂದ ರಾಜಮಾರ್ಗಗಳು– ಎಲ್ಲಿಗೆ ಹೋದರೂ ದೇವರುಗಳನ್ನು ಕಾಣುವ ನಾಡು ನಮ್ಮದು. ಎಂಥ ಒತ್ತಡದ ಸ್ಥಳದಲ್ಲೂ ದೇವರು ತನ್ನ ನೆಲೆಯನ್ನು ಕಂಡುಕೊಳ್ಳುವ ಪವಾಡ ನಿತ್ಯ ಕಾಣುವ ದೃಶ್ಯ. ಮಕ್ಕಳನ್ನು ದೇವರೆಂದು ನಮ್ಮ ಸಂಸ್ಕೃತಿ ಪರಿಗಣಿಸಿರುವ ಕಾರಣದಿಂದಲೋ ಏನೋ ಬೀದಿ ಮಕ್ಕಳ ಸಂಖ್ಯೆಯೂ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿದೆ. ಹಾಗೆಂದು, ಬೀದಿ ಬದಿಯಲ್ಲಿ ದೇವರನ್ನು ಕಂಡು ಕೈಮುಗಿಯುವಂತೆ, ಮಕ್ಕಳ ವಿಷಯದಲ್ಲೂ ಆರಾಧನಾ ಭಾವ ತಾಳುವಂತಿಲ್ಲ. ಬೀದಿಮಕ್ಕಳು ಮತ್ತು ಅನಾಥ ಮಕ್ಕಳ ಹೆಚ್ಚಳ ಸಮಾಜದ ನಾಡಿಮಿಡಿತ ಸರಿಯಾಗಿಲ್ಲ ಎನ್ನುವುದನ್ನು ಸೂಚಿಸುತ್ತದೆ.

ಮಕ್ಕಳ ಹಿತಾಸಕ್ತಿಗಾಗಿ ದುಡಿಯುತ್ತಿರುವ ‘ಬಾಸ್ಕೋ’, ‘ಅಪ್ಸಾ’ದಂಥ ಸಂಸ್ಥೆಗಳ ಕಾರ್ಯಕರ್ತರಿಗಂತೂ ಪ್ರಸ್ತುತ ಕೈತುಂಬಾ ಕೆಲಸ. ಪ್ರಸಕ್ತ ವರ್ಷ, ಜನವರಿಯಿಂದ ನವೆಂಬರ್‌ನ ‘ಮಕ್ಕಳ ದಿನ’ದವರೆಗೆ ಬೆಂಗಳೂರಿನಲ್ಲೇ ಸುಮಾರು 454 ಅನಾಥ ಮಕ್ಕಳು ಸೇವಾಸಂಸ್ಥೆಗಳ ತೆಕ್ಕೆಗೆ ಸಿಕ್ಕಿವೆ. ಕಳೆದ ವರ್ಷ ಈ ಪ್ರಮಾಣ 340ರಷ್ಟಿತ್ತು. ಇದು ಅನಾಥ ಮಕ್ಕಳ ಕುರಿತ ಅಂಕಿಅಂಶವಷ್ಟೇ. ಈ ಹನ್ನೊಂದು ತಿಂಗಳ ಅವಧಿಯಲ್ಲಿ ‘ಬಾಸ್ಕೋ’ ವತಿಯಿಂದಲೇ ವಿವಿಧ ಪ್ರಕರಣಗಳಲ್ಲಿ ರಕ್ಷಣೆಗೊಳಗಾದ ಮಕ್ಕಳ ಸಂಖ್ಯೆ 4800ಕ್ಕೂ ಹೆಚ್ಚು. ಈ ಅಧಿಕೃತ ಅಂಕಿ ಅಂಶದ ಜೊತೆಗೆ ವರದಿಯಾಗದೇ ಹೋದ ಮಕ್ಕಳ ಸಂಖ್ಯೆಯನ್ನು ಕಲ್ಪಿಸಿಕೊಳ್ಳುವುದು ಗಾಬರಿ ಉಂಟುಮಾಡುತ್ತದೆ.

ಮಕ್ಕಳು ಅನಾಥರಾಗಲು ಹಲವು ಕಾರಣಗಳಿವೆ. ಯಾವುದೋ ಕಾರಣಕ್ಕಾಗಿ ಮನಸ್ಸು ಮುರಿದುಕೊಂಡು ಕುಟುಂಬದಿಂದ ದೂರವಾಗಿ ಕೆಲವು ಮಕ್ಕಳು ತಬ್ಬಲಿಯಾಗುತ್ತವೆ. ಗಂಡು– ಹೆಣ್ಣಿನ ಅಕ್ರಮ ಸಂಪರ್ಕದಿಂದ ಬೀದಿಗೆ ಬೀಳುವ ಮಕ್ಕಳೂ ಇದ್ದಾರೆ. ಇವರ ಜೊತೆಗೆ ದುರ್ಘಟನೆಗಳಲ್ಲಿ ಮನೆಯವರನ್ನೆಲ್ಲ ಕಳೆದುಕೊಂಡು ಬೀದಿಪಾಲಾಗುವ ಕಂದಮ್ಮಗಳೂ ಇದ್ದಾರೆ. ಪರಿಸ್ಥಿತಿ ಭಿನ್ನವಾದರೂ ಪರಿಣಾಮ ಒಂದೇ. ಹೆತ್ತವರು ಮತ್ತು ಕುಟುಂಬದ ವಾತ್ಸಲ್ಯದಿಂದ ವಂಚಿತರಾಗುವುದರ ಜೊತೆಗೆ ಶಿಕ್ಷಣದಿಂದಲೂ ಈ ಮಕ್ಕಳು ವಂಚಿತರಾಗುತ್ತಾರೆ. ಕೆಲವು ಮಕ್ಕಳು ಸಮಾಜಘಾತುಕ ವ್ಯಕ್ತಿಗಳ ಕೈಗೆ ಸಿಲುಕಿ ಅಪರಾಧ ಪ್ರಕರಣಗಳಲ್ಲಿ ಭಾಗಿಯಾಗುವುದಿದೆ. 2012ರಲ್ಲಿ ಬೆಂಗಳೂರಿನಲ್ಲಿ ವರದಿಯಾದ ಸುಮಾರು 231 ಅಪರಾಧ ಪ್ರಕರಣಗಳಲ್ಲಿ ಬೀದಿಮಕ್ಕಳ ಪಾತ್ರವಿತ್ತು. ತಂಬಾಕು, ಮದ್ಯ, ಮಾದಕ ವಸ್ತುಗಳ ಅಮಲಿಗೆ ಸಿಲುಕಿ ಭವಿಷ್ಯ ಹಾಳುಮಾಡಿಕೊಳ್ಳುವ ಮಕ್ಕಳೂ ಇದ್ದಾರೆ. ಬೀದಿಗೆ ಬೀಳುವ ಕೆಲವು ಮಕ್ಕಳಷ್ಟೇ ಸಹೃದಯರ ಕಣ್ಣಿಗೆ ಬಿದ್ದು ಸರಿದಾರಿಯಲ್ಲಿ ನಡೆಯಲು ಸಾಧ್ಯವಾಗುತ್ತದೆ. ಬಹುತೇಕ ಮಕ್ಕಳು ವಿವಿಧ ಶೋಷಣೆಗಳಿಗೆ ಒಳಗಾಗಿ ಬದುಕು ಸವೆಸಬೇಕಾಗುತ್ತದೆ. 2012ರಲ್ಲಿ ಮಕ್ಕಳ ಮೇಲಿನ ದೌರ್ಜನ್ಯದ ಘಟನೆಗಳು ಶೇ 24ರಷ್ಟು ಹೆಚ್ಚು ವರದಿಯಾಗಿದ್ದವು.

ಮಕ್ಕಳು ಬೀದಿಪಾಲಾಗುವ ಸಾಮಾಜಿಕ ವೈಪರೀತ್ಯ ಆಧುನಿಕ ಜಗತ್ತು ಎದುರಿಸುತ್ತಿರುವ ಬಹುದೊಡ್ಡ ಸಮಸ್ಯೆಗಳಲ್ಲೊಂದು. ಯುದ್ಧಗಳು, ಆಂತರಿಕ ಸಂಘರ್ಷಗಳು, ಬಡತನ, ವಲಸೆ, ಅಂಗವೈಕಲ್ಯ, ಏಡ್ಸ್– ಇವೆಲ್ಲವೂ ಮಕ್ಕಳ ತಬ್ಬಲಿತನಕ್ಕೆ ಕಾರಣವಾಗಿವೆ. ಕೌಟುಂಬಿಕ ವಾತ್ಸಲ್ಯದಿಂದ ವಂಚಿತರಾದ ಚಿಣ್ಣರು ಏಷ್ಯಾದಲ್ಲೇ ಹೆಚ್ಚು (ಸುಮಾರು ಒಂಬತ್ತು ಕೋಟಿ ಅನಾಥ ಮಕ್ಕಳು) ಎನ್ನುವುದು ವಿಶ್ವಸಂಸ್ಥೆಯ ಅಂದಾಜು. ಭಾರತದಲ್ಲಿ ಎರಡೂವರೆ ಕೋಟಿ ಅನಾಥ ಮಕ್ಕಳಿದ್ದಾರೆ ಎನ್ನುವುದು ‘ಯುನಿಸೆಫ್’ ಅಂಕಿ ಅಂಶ. ಪರಿಸ್ಥಿತಿ ಇಷ್ಟು ದಾರುಣವಾಗಿದ್ದರೂ ಭಾರತ ಸರ್ಕಾರದ ಬಳಿ ದೇಶದಲ್ಲಿನ ನಿರಾಶ್ರಿತ ಮತ್ತು ಅನಾಥ ಮಕ್ಕಳ ಕುರಿತಾಗಿ ಸಮರ್ಪಕ ಅಂಕಿ ಅಂಶಗಳೇ ಇಲ್ಲ. ಇತ್ತೀಚೆಗೆ ಲೋಕಸಭೆಯಲ್ಲಿ ನಡೆದ ಚರ್ಚೆಯಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು– ‘ಅನಾಥ ಮತ್ತು ನಿರಾಶ್ರಿತ ಮಕ್ಕಳ ಸಂಖ್ಯೆಯಲ್ಲಿ ನಿರಂತರವಾಗಿ ಏರಿಳಿತ ಉಂಟಾಗುವುದರಿಂದ ಖಚಿತ ಮಾಹಿತಿ ಸರ್ಕಾರದ ಬಳಿ ಇಲ್ಲ’ ಎಂದು ಕೈಚೆಲ್ಲಿದ್ದಾರೆ. ಅವರ ಪ್ರಕಾರ, ಮಕ್ಕಳ ರಕ್ಷಣೆ ಯೋಜನೆಯಡಿಯಲ್ಲಿ ದೇಶದ ‘ಬಾಲ ಸಂರಕ್ಷಣಾ ಗೃಹ’ಗಳಲ್ಲಿ 75 ಸಾವಿರ ಮಕ್ಕಳು ಆಶ್ರಯ ಪಡೆದಿದ್ದಾರೆ.

ತಬ್ಬಲಿ ಮಕ್ಕಳ ಸಂಖ್ಯೆ ಬೀದಿಗಳಲ್ಲಿ ವೃದ್ಧಿಸುತ್ತಲೇ ಇದ್ದರೂ ನಾವು ನಾಗರಿಕತೆ ಮತ್ತು ಅಭಿವೃದ್ಧಿಯ ಪ್ರಭಾವಳಿಗಳ ಭ್ರಮೆಗಳಲ್ಲಿ ಮುಳುಗಿರುತ್ತೇವೆ. ‘ಮಕ್ಕಳಿಸ್ಕೂಲು ಮನೇಲಲ್ವಾ’ ಎನ್ನುವುದು ನಾಟಕಕಾರ ಟಿ.ಪಿ. ಕೈಲಾಸಂ ಅವರ ಜನಪ್ರಿಯ ನಾಟಕ. ಇಂದಿನ ಪರಿಸ್ಥಿತಿ ನೋಡಿದರೆ, ಅನೇಕ ಮಕ್ಕಳ ಬದುಕು ಬಯಲುಗಳಲ್ಲೇ ರೂಪುಗೊಳ್ಳುತ್ತಿರುವಂತಿದೆ. ಈ ಪರಿಸ್ಥಿತಿ ನಮ್ಮ ಸಮಾಜ, ಶಿಕ್ಷಣ ವ್ಯವಸ್ಥೆ, ಪಠ್ಯಕ್ರಮ– ಎಲ್ಲದರ ಅಣಕದಂತಿದೆ. ಮಕ್ಕಳನ್ನು ದೇವರೆಂದು ಬಗೆದು ಬೀದಿಯಲ್ಲೇ ಬಿಡುವ ಬದಲು, ಅವರನ್ನು ನಾಡಿನ ನಾಳಿನ ಭವಿಷ್ಯವೆಂದು ಗುರ್ತಿಸಬೇಕಾಗಿದೆ, ಬೀದಿಗಳಿಂದ ಕೌಟುಂಬಿಕ ಪರಿಸರಕ್ಕೆ ಮರಳಿ ತರಬೇಕಾಗಿದೆ.

■ ರಘುನಾಥ ಚ.ಹ.



ವಿಜಯಾ